ಮಂಡ್ಯ ಜಿಲ್ಲೆಯಲ್ಲಿ ವೋಲ್ಟೇಜ್ ಸುಧಾರಣೆ

1370 (2026) ಶ್ರೀ ಆತ್ಮಾನಂದ.ಎಂ.ಎಸ್ (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಕಡಿಮೆ ವೋಲ್ಟೇಜಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ವೋಲ್ಟೇಜ್ ಸಮಸ್ಯೆ ಪರಿಹರಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ?

ಶ್ರೀ ವೀರ ಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು

ಆ) ಈ ಕಡಿಮೆ ವೋಲ್ಟೇಜ್ ಪರಿಸ್ಥಿತಿಯ ನಿವಾರಣೆಗಾಗಿ ಕೆ.ಐ.ಪ್ರ.ನಿ.ನಿ. ಯು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

1. ಮಂಡ್ಯ ನಗರದ ಸಮೀಪ ತೂಬಿನಕೆರೆಯಲ್ಲಿ ಒಂದು 220:66 ಕೆವಿ, 2x100 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸುಮಾರು 26.6 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ಸೆಪ್ಟೆಂಬರ್ 2000ದ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಿದೆ.

2. ಈ ಜಿಲ್ಲೆಯಲ್ಲಿ ಸಂತೆಬಾಚಹಳ್ಳಿ, ಅಡ್ಡಿಹಳ್ಳಿ, ಅರಕೆರೆ ಹಂಪಾಪುರ ಮತ್ತು ಬಸರಾಳು ಗ್ರಾಮಗಳಲ್ಲಿ ತಲಾ ಒಂದು 66 : 11 ಕೆವಿ ವಿದ್ಯುತ್ ಸಬ್ ಸ್ಟೇಷನ್‌ನನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಈಉದ್ದೇಶಿತ ಸಬ್ ಸ್ಟೇಷನ್‌ಗಳ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಸಹಾ ಪಡೆಯಲಾಗಿದೆ. ಅಲ್ಲದೆ ಈ ಜಿಲ್ಲೆಯ ಹಲಗೂರು ಗ್ರಾಮದಲ್ಲಿಯೂ ಸಹಾ ಒಂದು 66: 11 ಕೆವಿ ವಿದ್ಯುತ್ ಸಬ್ ಸ್ಟೇಷನ್‌ನನ್ನು ಸ್ಥಾಪಿಸಲುಉದ್ದೇಶಿಸಿದ್ದು, ಈ ಪ್ರಸ್ತಾವನೆಗೆ ನಿಗಮದ ತಾಂತ್ರಿಕ ಸಮಿತಿಯು 10:99ರಲ್ಲಿ ತನ್ನ ಅನುಮೋದನೆಯನ್ನು ನೀಡಿರುತ್ತದೆ.

3. ಈ ಜಿಲ್ಲೆಯ ಕಿಕ್ಕೇರಿ, ಮಳವಳ್ಳಿ ಹಾಗೂ ಕೆ. ಆರ್.ಪೇಟೆಗಳಲ್ಲಿ ಹಾಲಿ ಇರುವ 66 : 11 ಕೆವಿ ವಿದ್ಯುತ್ ಸಬ್ ಸ್ಟೇಷನ್‌ಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸಲು ಸಹಾ ಉದ್ದೇಶಿಸಿದೆ.

4. ಈ ಜಿಲ್ಲೆಯಲ್ಲಿರುವ ಶಿವನಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನವೀಕರಿಸಿ ಸಾಮರ್ಥ್ಯವನ್ನು ಹೆಚ್ಚಳಗೊಳಿಸಲು ಸುಮಾರು 68.38 ಕೋಟಿ ರೂ.ಗಳ ವೆಚ್ಚದ ಕಾಮಗಾರಿಗೆ ಪವರ್ ಫೆನಾನ್ಸ್ ಕಾರ್ಪೊರೇಷನ್ ಯಿಂದ ಸಾಲ ಸೌಲಭ್ಯವನ್ನು ಪಡೆಯಲಾಗಿದೆ. ನವೀಕರಣ ಕಾರ್ಯವು ಪ್ರಗತಿಯಲ್ಲಿದೆ. ಕೆಲಸವು ಪೂರ್ಣಗೊಂಡಾಗ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 42 ಮೆ.ವ್ಯಾ. ನಿಂದ 48 ಮೆ.ವ್ಯಾ.ಗೆ ಹೆಚ್ಚಳಗೊಳ್ಳುವುದು. ಅಲ್ಲದೆ, ಈ ಜಿಲ್ಲೆಯ ಹಲವಾರು ಕಡೆ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಕಡಿಮೆ ಗಾತ್ರದ ವಿದ್ಯುತ್ ಕಂಡಕ್ಟರ್‌ಗಳನ್ನು ಅಧಿಕ ಗಾತ್ರದ ವಿದ್ಯುತ್ ಕಂಡಕ್ಟರ್‌ಗಳ ಮೂಲಕ ಬದಲಾಯಿಸುವುದು, ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿವುದು, ನೇರ ವಿದ್ಯುತ್ ಫೀಡರುಗಳನ್ನು ನಿರ್ಮಾಣ ಮಾಡುವುದು ಮುಂತಾದ ವ್ಯವಸ್ಥೆ ಸುಧಾರಣಾ ಕಾಮಗಾರಿಗಳನ್ನು ಸಹಾ ನಿರ್ವಹಿಸಲಾಗುತ್ತಿದೆ.